


'ಸತ್ಯಂ ಬ್ರೂಯಾತ್, ಪ್ರಿಯಂ ಬ್ರೂಯತ್, ನ ಬ್ರೂಯಾತ್ ಸತ್ಯಮಪ್ರಿಯಮ್!' ಅಂತ. ಅದೇಕೆ ಅಂತ ನನಗಿನ್ನೂ ಗೊತ್ತಾಗಿಲ್ಲ."

ಕರಮಚಂದ ಇನ್ನೂ ಬಾಲ್ಕನಿಯ ಬಳಿ ನಿಂತು ವೀಕ್ಷಣೆ ಮುಂದುವರೆಸಿದ್ದ.

"ಕೊಲೆಯಾದ ದಿನ ನಿಮಗೆ ಮಿಥಿಲಾಳ ಬೊಬ್ಬೆ ಕೇಳಿತ್ತೆ?"

"ಆಂಬುಲೆನ್ಸ್ ಬಂದಾಗಲಷ್ಟೇ ಅವಘಡವಾಗಿದ್ದು ಗೊತ್ತಾಗಿದ್ದು."

"ಬಿದ್ದಪ್ಪ, ನಾವೀಗ ಹೋಗ್ಬೇಕು! ಕ್ಷಮಿಸಿ, ದೊರೆಮಣಿಯವರೇ" ಹಾಗೆಂದು ಕರಮಚಂದ ದಾಪುಗಾಲು ಹಾಕಿದ. ಏನೆಂದು ಅರ್ಥವಾಗದೇ, ನಾನು ಆತನ ಹಿಂದೆಯೇ ಧಾವಿಸಿದೆ.

ಚೆಟ್ಟಿಯಪ್ಪನ ಮನೆಯ ಕಾಂಪೌಂಡಿನಲ್ಲಿ ಕತ್ತಲು ಆವರಿಸಿತ್ತು. ಹಳೆಯ ಗೇಟು ಸರಿಸುವಾಗ, ಕೀರಲು ಸದ್ದು. ಚೆಟ್ಟಿಯಪ್ಪನ ಮನೆಯೊಳಗೆ ಬೆಳಕಿನ ದಂಡವೊಂದು ಚಲಿಸಿದಂತೆ ಕಂಡಿತು. ಕೆಲ ಕ್ಷಣಗಳಲ್ಲಿ ಬಾಗಿಲೊಂದು ರಪ್ಪನೆ ಮುಚ್ಚಿದ ಸದ್ದು. ಕರಮಚಂದ ಪಕ್ಕಕ್ಕೆ ತಿರುಗಿ, ಮನೆಯ ಹಿಂಭಾಗದತ್ತ ಓಡಿದ. ಅಷ್ಟರಲ್ಲಿ ದೊಪ್ಪನೆಯ ಸದ್ದೂ, ಬೆನ್ನಿಗೇ ಬೈಕೊಂದು ಗೊರಗುಟ್ಟಿದ ದನಿ ತೂರಿ ಬಂತು.

"ತಪ್ಪಿಸಿಕೊಂಡ!" ಕರಮಚಂದನ ಉದ್ಗಾರ.

ಬಾಲ್ಕನಿಯಲ್ಲಿ ನಿಂತು ಕೆಳಗಡೆ ನಿಟ್ಟಿಸುತ್ತಿದ್ದಾಗ, ಚೆಟ್ಟಿಯಪ್ಪನ ಮನೆಯೊಳಗೆ ಬೆಳಕಾಡಿದ ಹಾಗೆ ಕಂಡು ಧಾವಿಸಿ ಬಂದಿದ್ದರೂ, ಆತ ಪಾಗಾರ ಹಾರಿ ಪರಾರಿಯಾಗಿದ್ದ. ತೆರೆದಿದ್ದ ಹಿಂಬಾಗಿಲಿನ ಮೂಲಕ ಒಳಗೆ ಪ್ರವೇಶಿಸಿದೆವು. ಹಜಾರದಲ್ಲಿ ಲೈಟ್ ಹಾಕಿದಾಗ, ನಿಗೂಢ ಅತಿಕ್ರಮಿಯ ಉದ್ದೇಶ ಸ್ಪಷ್ಟವಾಗಿತ್ತು. ಕಪಾಟಿನಲ್ಲಿದ್ದ ಪುಸ್ತಕಗಳನ್ನೆಲ್ಲಾ ಮೇಜಿನ ಮೇಲೆ ಬೇಕಾಬಿಟ್ಟಿ ಹರಡಲಾಗಿತ್ತು. ಆತ ಯಾವುದೋ ವಸ್ತುವನ್ನು ಹುಡುಕಲು ಬಂದಿದ್ದನೆಂಬುದು ನಿಚ್ಚಳ. ಆತ ಬಂದಿದ್ದು ಯಾಕಾಗಿ? ಮಲಗುವ ಕೋಣೆಯಲ್ಲೂ ವಸ್ತುಗಳು ಚೆಲ್ಲಾಪಿಲ್ಲಿಯಾಗಿದ್ದವು. ಅಲ್ಲೊಂದು ಲ್ಯಾಪ್‌ಟ್ಯಾಪ್ ಬ್ಯಾಗು